

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ನಮ್ಮ ಜನರು ಮತ್ತು ಜನನಾಯಕರು....

ಅಮೇರಿಕಾದ ಹಿಂದಿನ ಅಧ್ಯಕ್ಷ ಬಿಲ್ ಕ್ಲಿಂಟನ್ ಒಮ್ಮೆ ಕ್ಯಾಲಿಫೋರ್ನಿಯಾಕ್ಕೆ ಹೋಗಿದ್ದರು. ವಾಪಾಸ್ ಹೊರಡುವಾಗ ಲಾಸ್ ಆಂಜಲೀಸ್ ವಿಮಾನ ನಿಲ್ದಾಣದಲ್ಲಿರುವ 'ಬೆವೆರ್ಲಿ ಹಿಲ್ಸ್ ಹೇರ್‌ಕಟ್' ಸೆಲೂನ್‌ಗೆ ಕ್ಷೌರ ಮಾಡಿಸಿಕೊಳ್ಳಲು ಹೋದರು. ಇದರಿಂದ ಅವರ ವಿಮಾನ ಹೊರಡುವುದು ಸ್ವಲ್ಪ ವಿಳಂಬವಾಯಿತು. ಅದರ ಪರಿಣಾಮವಾಗಿ ಲಾಸ್ ಆಂಜಲೀಸ್ ವಿಮಾನ ನಿಲ್ದಾಣಕ್ಕೆ ಬಂದಿಳಿಯಬೇಕಾಗಿದ್ದ ಅನೇಕ ನಾಗರೀಕ ವಿಮಾನಗಳು 10 ರಿಂದ 15 ನಿಮಿಷಗಳವರೆಗೆ ಆಕಾಶದಲ್ಲಿಯೇ ಸುತ್ತುತ್ತಾ ಇರಬೇಕಾಯಿತು. ಏರ್ ಟ್ರ್ಯಾಫಿಕ್ ಕಂಟ್ರೋಲ್ ಅಧಿಕಾರಿಗಳು ಭದ್ರತಾದೃಷ್ಟಿಯಿಂದ ಆ ವಿಮಾನಗಳಿಗೆ ಕೆಳಗಿಳಿಯಲು ಅನುಮತಿ ನೀಡಲಿಲ್ಲ. ಈ ಘಟನೆಯನ್ನು ಅಮೇರಿಕಾದ ಪತ್ರಿಕೆಗಳು ಮುಖಪುಟದಲ್ಲಿ ಪ್ರಕಟಿಸಿ ಪ್ರಯಾಣಿಕರಿಗೆ ಆದ ತೊಂದರೆಯನ್ನು ವಿವರಿಸಿದವು. 'ಗ್ಲೋಬ್' ಎಂಬ ಪತ್ರಿಕೆ ತನ್ನ ಮುಖಪುಟದಲ್ಲಿ ದಪ್ಪನೆಯ ಅಕ್ಷರಗಳಲ್ಲಿ "Presidential style: Air traffic waits for Beverly hills haircut" ಎಂದು ವರದಿ ಮಾಡಿತು. ರಿಪಬ್ಲಿಕನ್ ಪಕ್ಷದ ನಾಯಕ ಡಾನ್ ಬರ್ಟನ್ "He ought to be more concerned about trimming the deficit budget than trimming his hair" (ಅಧ್ಯಕ್ಷರು ತಮ್ಮ ತಲೆಗೂದಲನ್ನು ಕತ್ತರಿಸಿಕೊಳ್ಳುವುದಕ್ಕಿಂತ ತಮ್ಮ ಖೋತಾ ಬಜೆಟ್ಟನ್ನು ಕತ್ತರಿಸುವುದರ ಕಡೆಗೆ ಹೆಚ್ಚಿನ ಗಮನ ಹರಿಸಬೇಕಾಗಿತ್ತು) ಎಂದು ಟೀಕಾ ಪ್ರಹಾರ ಮಾಡಿದರು. ಅರಸೊತ್ತಿಗೆಯ ಈ ವಿಲಾಸೀ ಪ್ರವೃತ್ತಿಯನ್ನು ಅಮೇರಿಕಾದ ಜನರು ದೇಶಾದ್ಯಂತ ಖಂಡಿಸಿದರು. ಸನ್ಮಾನ್ಯ ಅಧ್ಯಕ್ಷರಿಗೆ ತಲೆ ಕ್ಷೌರ ಮಾಡಿಸಿಕೊಳ್ಳಲು ಅವರ ಅಧಿಕೃತ ನಿವಾಸ ವೈಟ್ ಹೌಸ್‌ನಲ್ಲಿ ವ್ಯವಸ್ಥೆ ಇಲ್ಲವೇ? ಎಂದು ಹರಿಹಾಯ್ದರು. ದೇಶಾದ್ಯಂತ ಇದರ ಬಗ್ಗೆ ವಾದ-ವಿವಾದಗಳುಂಟಾಗಿ ಜನರ ಈ ಆಕ್ರೋಶವನ್ನು ಶಮನಗೊಳಿಸಲು ಅಧ್ಯಕ್ಷ ಬಿಲ್ ಕ್ಲಿಂಟನ್ ಟೆಲಿವಿಷನ್‌ನಲ್ಲಿ ಹಾಜರಾಗಿ ತನ್ನಿಂದ ಪ್ರಯಾಣಿಕರಿಗೆ ತೊಂದರೆಯುಂಟಾಗಿದ್ದಕ್ಕೆ ಅಮೇರಿಕೆಯ ಸಮಸ್ತ ಜನತೆಯ ಕ್ಷಮೆ ಯಾಚಿಸಿದರು!...

ಇಂತಹ ಒಂದು ಪ್ರಕರಣ ದೇಶವ್ಯಾಪೀ ಖಂಡನೆಗೆ ಒಳಗಾಗುತ್ತದೆ ಎಂಬುದನ್ನು ನಮ್ಮ ದೇಶದಲ್ಲಿ ಊಹೆ ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ಬಸ್‌ಸ್ಟಾಪ್‌ಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ, ಶಾಲಾ/ಕಾಲೇಜಿನ ಸ್ಟಾಫ್‌ರೂಂಗಳಲ್ಲಿ, ಕ್ಯಾಂಟೀನ್‌ಗಳಲ್ಲಿ, ಊರ ಗುಡಿ ಮುಂದಿನ ಸೋಮಾರಿ ಕಟ್ಟೆಗಳಲ್ಲಿ, ದಾರಿಬೀದಿಗಳಲ್ಲಿ, ಮದುವೆ ಮನೆಗಳಲ್ಲಿ, ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಗಂಟೆಗಟ್ಟಲೆ ಹರಟೆ ಹೊಡೆಯುವ ಅಭ್ಯಾಸವಿರುವ ನಮ್ಮ ದೇಶದ ಬಹುತೇಕ ಜನರಿಗೆ ಸಮಯದ ಬೆಲೆಯೇ ಗೊತ್ತಿಲ್ಲ. ನಮ್ಮ ಭಾಷೆಯಲ್ಲಿಯೂ ಇದಕ್ಕೆ ಸ್ಪಷ್ಟವಾದ 'ಪುರಾವೆ' ಸಿಕ್ಕುತ್ತದೆ. ರಜಾದಿನಗಳನ್ನು ಹೇಗೆ 'ಕಳೆದಿರಿ'? ಎಂದು ನಾವು ಕನ್ನಡದಲ್ಲಿ ಕೇಳಿದರೆ, ಇಂಗ್ಲೀಷಿನಲ್ಲಿ ಹೇಗೆ 'ಖರ್ಚು' ಮಾಡಿದಿರಿ (How did you 'spend' your holidays?) ಎಂದು ಪಾಶ್ಚಾತ್ಯರು ಕೇಳುತ್ತಾರೆ. ಸಮಯವನ್ನು ಪಾಶ್ಚಾತ್ಯರು ಹಣದಂತೆ ಎಚ್ಚರಿಕೆಯಿಂದ ಖರ್ಚು ಮಾಡಿದರೆ, ನಮ್ಮವರು ಲೆಕ್ಕವಿಲ್ಲದಷ್ಟು ಕಳೆಯುತ್ತಾರೆ. ಹಣವನ್ನು ದುರ್ವ್ಯಸನಗಳಿಗೆ ಕಳೆಯುವಂತೆ, ಕಾಲವನ್ನು ಕಾಡುಹರಟೆಯಲ್ಲಿ ಕಳೆಯುತ್ತಾರೆ.

'ಓ ಏನ್ ರಾಯರೇ ಇಲ್ಲಿ?'
'ಹೀಗೆ ಬಂದೆ...'
'ಎಲ್ಲಿಗೆ ಹೊರಟಿದ್ದೀರಿ?'
'ಹೀಗೆ ಹೊರಟಿದ್ದೇನೆ...'
'ಎಲ್ಲಾ ಸೌಖ್ಯಾನಾ?'
'ಏನ್ ಸೌಖ್ಯನೋ ಏನೋ?...'

‘ಯಾಕೆ, ಏನಾಯ್ತು?’
‘ಏನ್ ಹೇಳೋಣ ಬಿಡಿ...’
‘ನನ್‌ದಿರ್‍ಲಿ, ನೀವ್ ಹೇಗಿದ್ದೀರಿ?’
‘ಏನೋ ಹೀಗಿದ್ದೀನಿ!
ಸತ್ತಿಲ್ಲ, ಬದುಕಿಲ್ಲ! ಹೀಗೆ ಒಂದ್ ಥರಾ....’

ಎಂತಹ ‘ಫಿಲಸಾಫಿಕಲ್’ ಸಂಭಾಷಣೆ ಇಬ್ಬರದ್ದೂ! ಹಾಗೆ ನೋಡಿದರೆ ನಮ್ಮ ಜನರ ದೃಷ್ಟಿಯಲ್ಲಿ ‘ಹೇಗಿದ್ದೀರಿ?’ ಎಂದು ಕೇಳುವುದು ಸರಿ. ಆದರೆ ‘ಎಲ್ಲಿಗೆ ಹೊರಟಿದ್ದೀರಿ?’ ಎಂದು ಕೇಳುವುದು ತಪ್ಪು. ಅದು ಶಿಷ್ಟಾಚಾರವಲ್ಲ, ಅದೊಂದು ಅಪಶಕುನ. ಹೋದ ಕೆಲಸ ಆಗದೇ ಇದ್ದರೆ ಅದಕ್ಕೆ ನೀವು ಹಾಗೆ ಕೇಳಿದ್ದೇ ಕಾರಣ. ನೀವು ಹಾಗೆ ಕೇಳಿದಾಗಲೇ ಅವರಿಗೆ ಅನುಮಾನ ಷುರುವಾಗಿತ್ತು. ಇನ್ನು ಹೋಗುತ್ತಿದ್ದೇನೆ ಎನ್ನುವುದೂ ತಪ್ಪು. ರೀ, ಥೂ ಬಿಡ್ತೂ ಅನ್ರಿ. ‘ಹೋಗಿ ಬರ್ತೀನಿ’ ಎನ್ನಬಾರದೆ ಎಂದು ನಿಮಗೆ ಮಕ್ಕಳಿಗೆ ಕಲಿಸಿಕೊಟ್ಟಂತೆ ಮಾತು ಕಲಿಸಿಕೊಡುತ್ತಾಳೆ ನಿಮ್ಮ ಮೋಹದ ಮಡದಿ. ಇಲ್ಲದಿದ್ದರೆ ಎಲ್ಲಿ ನೀವು ಸೀದಾ ಯಮಲೋಕಕ್ಕೇ ಹೋಗಿಬಿಡುತ್ತೀರೋ ಎಂಬ ಆತಂಕ ಆ ನಿಮ್ಮ ಸಹಧರ್ಮಿಣಿಗೆ! ಎಷ್ಟೇ ಆಗಲಿ ಭಾರತೀಯ ನಾರಿಯಾಗಿ ಆಕೆ ಸದಾ ಸುಮಂಗಲೆಯಾಗಿರಬೇಕೆಂದು ಬಯಸುತ್ತಾಳಲ್ಲವೇ?

ನಮ್ಮ ರಾಜಕೀಯ ಮುಖಂಡರು ಸಭೆ ಸಮಾರಂಭಗಳಿಗೆ ಗಂಟೆಗಟ್ಟಲೆ ತಡವಾಗಿ ಬರುವುದು ಸರ್ವೇ ಸಾಮಾನ್ಯ ದೃಶ್ಯ. ಅದಕ್ಕಾಗಿ ಅವರಿಗೆ ಯಾರೂ ಛೀಮಾರಿ ಹಾಕುವುದಿಲ್ಲ. ಇದೀಗ ತಾನೇ ಬೆಂಗಳೂರಿನಿಂದ ಮುಖ್ಯಮಂತ್ರಿಗಳ ಹೆಲಿಕಾಪ್ಟರ್ take off ಆಗಿದೆಯೆಂದು ತಿಳಿದುಬಂದಿದೆ ಎಂದು ತಮ್ಮ BBC ವಾರ್ತೆಯನ್ನು ಸಮಾರಂಭದ ಸಂಘಟಕರು ಮೈಕಾಸುರನ ಮುಂದೆ ಒದರುತ್ತಲೇ ಇರುತ್ತಾರೆ. ಒಮ್ಮೆಲೇ ಏನೋ ಶಬ್ದ ಆಗುತ್ತದೆ. ಜನರ ದೃಷ್ಟಿಯೆಲ್ಲಾ ಅತ್ತ ಕಡೆ ಹರಿದು ಸಭೆಯಲ್ಲಿ ಕೋಲಾಹಲ ಉಂಟಾಗುತ್ತದೆ. ವಾಸ್ತವವಾಗಿ ಅಲ್ಲಿ ಯಾವುದೋ ಬೀದಿ ನಾಯಿ ಬೊಗಳುತ್ತಿರುತ್ತದೆ! ಮುಖ್ಯಮಂತ್ರಿಗಳು ಇನ್ನೂ ಮನೆಯಿಂದ ಹೊರಟೇ ಇರುವುದಿಲ್ಲ - ಆನುರಾಗದ ‘ಅನುಗ್ರಹ’ದಲ್ಲಿ ಆರಾಮವಾಗಿ ‘ಶೇಷಶಯನ’ರಾಗಿರುತ್ತಾರೆ! ಎಷ್ಟೋ ಹೊತ್ತಿನ ಮೇಲೆ ಆಕಾಶದಲ್ಲಿ ಹೆಲಿಕಾಪ್ಟರ್ ಶಬ್ದ ಆಗುತ್ತದೆ. ಹಳ್ಳಿಯ ಮುಗ್ಧ ಜನರು ಆಕಾಶದಿಂದ ಬಂದಿಳಿವ ಆ ಲೋಹದ ಹಕ್ಕಿಯನ್ನು ಕಾತುರತೆಯಿಂದ ನೋಡಲು ಓಡುತ್ತಾರೆ. ಪೋಲೀಸರು ಅವರನ್ನು ತಡೆಗಟ್ಟಿ ಲಾಠಿಪ್ರಹಾರ ನಡೆಸುತ್ತಾರೆ. ಸಮಾರಂಭದ ಸಂಘಟಕರು ಹಾರ-ತುರಾಯಿಗಳನ್ನು ಹಿಡಿದು ಮುಖ್ಯಮಂತ್ರಿಗಳನ್ನು ಸ್ವಾಗತಿಸಲು ಹೆಲಿಪ್ಯಾಡಿನತ್ತ ದೌಡಾಯಿಸುತ್ತಾರೆ. ಈಗ ತಾನೇ ಮಾನ್ಯ ಮುಖ್ಯ ಮಂತ್ರಿಗಳು ಹೆಲಿಕಾಪ್ಟರ್‌ನಲ್ಲಿ ಬಂದಿಳಿದಿದ್ದಾರೆ, ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಸಭೆಗೆ ಆಗಮಿಸುತ್ತಾರೆಂದು ಮೈಕ್‌ನಲ್ಲಿ ಕೂಗಿ ಹೇಳುತ್ತಿದ್ದಂತೆಯೇ ಸಭೆಯಲ್ಲಿ ವಿದ್ಯುತ್ ಸಂಚಾರವಾಗುತ್ತದೆ. ಜನರ ದೃಷ್ಟಿಯೆಲ್ಲಾ ಪೆಂಡಾಲ್ ಹೊರಗೆ ನೆಟ್ಟಿರುತ್ತದೆ. ಕ್ಷಣಕ್ಕೊಮ್ಮೆ ಎದ್ದೆದ್ದು ನೋಡುತ್ತಿರುತ್ತಾರೆ. ಸ್ವಲ್ಪ ಹೊತ್ತಿನಲ್ಲಿಯೇ ಗತ್ತಿನಿಂದ ಬಿಜಯಂಗೈಸುವ ಮಾನ್ಯ ಮುಖ್ಯಮಂತ್ರಿಗಳು ಏನೋ ಒಂದು ದೊಡ್ಡ ಸಾಧನೆ ಮಾಡಿ ಬಂದವರಂತೆ ಹಣೆಯ ಮೇಲಿನ ಬೆವರನ್ನು ಕರ್ಚೀಫ್‌ನಲ್ಲಿ ಒರೆಸಿಕೊಳ್ಳುತ್ತಾ ದಿವ್ಯದರ್ಶನವನ್ನು ಜನರಿಗೆ ದಯಪಾಲಿಸುತ್ತಾರೆ. ಅವರು ಎಷ್ಟೇ ತಡವಾಗಿ ಬಂದರೂ ಬಿಸಿಲಿನಲ್ಲಿ ಕಾಯುತ್ತಾ ನಿಂತಿದ್ದ ಜನ ಅವರ ವಿರಾಡ್‌ರೂಪದರ್ಶನದಿಂದ ಸಂತುಷ್ಟರಾಗಿ ಕೇಕೆ ಹೊಡೆದು ಅವರಿಗೆ ‘ಜೈ’ಕಾರ ಹಾಕಿ ಕಿವಿಗಡಚಿಕ್ಕುವಂತೆ ಕರತಾಡನ ಮಾಡುತ್ತಾರೆ. ನಮ್ಮ ಮಂತ್ರಿಗಳು ತಡವಾಗಿ ಬಂದಷ್ಟೂ ಅವರ ಕಿಮ್ಮತ್ತು, ಗೌರವ ಹೆಚ್ಚು. ಏಕೆಂದರೆ ಅವರನ್ನು ಕಾಯುವ ಮೂರ್ಖರು ಈ ನಾಡಿನಲ್ಲಿ ಇದ್ದಾರೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತು, ಅದಕ್ಕೆ.

ಗಂಟೆಗಟ್ಟಲೆ ಉರಿಬಿಸಿಲಿನಲ್ಲಿ ಜನರು ಕಾದ ಮೇಲೂ ಮಂತ್ರಿ ಮಹೋದಯರು ಸಮಾರಂಭಕ್ಕೆ ಬರದೇ ಇದ್ದರೆ ‘ಅನಿವಾರ್ಯ ಕಾರಣಗಳಿಂದ’ ಬರಲು ಸಾಧ್ಯವಾಗುತ್ತಿಲ್ಲವೆಂದು ಇದೀಗ CM ಆಫೀಸಿನಿಂದ ಪೋಲೀಸರಿಗೆ wireless message ಬಂದಿದೆಯೆಂಬ ‘ಸುಮಧುರ’ ವಾರ್ತೆಯನ್ನು ಸ್ವಾಗತ ಭಾಷಣಕಾರರು ಸಭೆಗೆ ತಿಳಿಸುತ್ತಾರೆ. ಆದರೂ ಅವರ ಅನುಪಸ್ಥಿತಿಯಲ್ಲಿ ಎಲ್ಲರಿಗಿಂತ ಮೊದಲು ಅವರನ್ನೇ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ. ಬೆಂಗಳೂರಿನಲ್ಲಿರುವ ಮುಖ್ಯಮಂತ್ರಿಗಳ ಕಿವಿಗೆ ಕೇಳಿಸುವಂತೆ ಎತ್ತರದ ದನಿಯಲ್ಲಿ ಅವರ ಗುಣಗಾನ ಮಾಡುತ್ತಾರೆ. ಕಾಣದ ದೇವರಿಗೆ ಪ್ರಾರ್ಥನೆ ಸಲ್ಲಿಸುವುದಿಲ್ಲವೇ? ಹಾಗೆ. ಮುಠ್ಠಾಳ ಜನ ಅದಕ್ಕೂ ಚಪ್ಪಾಳೆ ತಟ್ಟುತ್ತಾರೆ. ‘ಜನಶಬ್ದಂ ಅದು ನಪುಂಸಕಂ’ ಎನ್ನುತ್ತಾನಲ್ಲವೆ ಕೇಶಿರಾಜ! ಸಭೆಯಲ್ಲಿ ಹಾಜರಿರದ ‘ಗಣ್ಯಮಾನ್ಯ’ ವ್ಯಕ್ತಿಗಳಿಗೆ ಈ ರೀತಿ ಸ್ವಾಗತ ಹೇಳುವ ಭಾರತೀಯರ ‘ಹೃದಯವೈಶಾಲ್ಯ’ ನಾವು ಕಂಡಂತೆ ಬೇರೆ ಯಾವ ದೇಶದಲ್ಲೂ ಇಲ್ಲ. ಸಭೆಯಲ್ಲಿ ಸಕಾಲಕ್ಕೆ ಆಗಮಿಸಿ ಮುಖ್ಯಮಂತ್ರಿಗಳ ಮುಖಾರವಿಂದದ ದರ್ಶನದಿಂದ ಪುಲಕಿತರಾಗಲು ಕಾದು ಕುಳಿತಿದ್ದ ಇತರೆ ಮಂತ್ರಿಗಳು ಮತ್ತು ಶಾಸಕರು ನಿರಾಶೆಗೊಂಡು ತಮ್ಮ ಶ್ರೀಮಂತ ಕಾಯಿಲೆಗಳಿಂದ ಕಣ್‌ಕಣ್ ಬಿಡುತ್ತಿರುತ್ತಾರೆ. ಪೋಲೀಸರು ಸಮಾಧಾನದ ನಿಟ್ಟುಸಿರು ಬಿಟ್ಟು ಠಾಣೆಗೆ ತೆರಳುತ್ತಾರೆ. ಹಸಿವಿನಿಂದ ಕಂಗಾಲಾದ ‘ಬಾಡಿಗೆ’ ಜನರು ಸಮಾರಂಭದ ಸಂಘಟಕರಿಂದ ಸಭೆಯ ಕೊನೆಯಲ್ಲಿ ಪಡೆಯಬೇಕಾಗಿದ್ದ ‘ಫಲತಾಂಬೂ(ತಂಬು)ಲ’ಕ್ಕಾಗಿ ಬಡಿದಾಡುತ್ತಿರುತ್ತಾರೆ!

ಈ ರೀತಿ ಸಾರ್ವಜನಿಕ ಸಮಾರಂಭಗಳಲ್ಲಿ ಮಂತ್ರಿಮಹೋದಯರ ಬರವಿಗಾಗಿ ಕಾದು ಕುಳಿತುಕೊಳ್ಳುವ ಪರಿಪಾಠ ನಮ್ಮ ಮಠದ ವಾರ್ಷಿಕ ಸಮಾರಂಭವಾದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಇಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. 1974 ರಲ್ಲಿ ಬೆಂಗಳೂರಿನ ಸುಭಾಷ್ ಮೈದಾನದಲ್ಲಿ (ಈಗಿನ ಬಸ್‌ನಿಲ್ದಾಣ) ಈ ಮಹೋತ್ಸವ ನಡೆದಿತ್ತು. ವಿಶೇಷವಾಗಿ ನಿರ್ಮಿಸಲಾಗಿದ್ದ ಭವ್ಯವಾದ 'ಸರ್ವಜ್ಞ ಸ್ಮಾರಕ ಮಹಾಮಂಟಪ'ದ ಉದ್ಘಾಟನೆಯನ್ನು ಆಗಿನ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸ್‌ರವರು ಮಾಡಬೇಕಾಗಿತ್ತು. ಆಹ್ವಾನಪತ್ರಿಕೆಯಲ್ಲಿ ಅಚ್ಚಾದ ಸಮಯಕ್ಕೆ ಸರಿಯಾಗಿ ನಮ್ಮ ಲಿಂಗೈಕ್ಯ ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ದಯಮಾಡಿಸಿದರು. ಸುತ್ತ ಕಣ್ಣು ಹಾಯಿಸಿದರು. ಇನ್ನೂ ಮುಖ್ಯಮಂತ್ರಿಗಳು ಬಂದಿರಲಿಲ್ಲ. ಅವರಿಗಾಗಿ ಕಾಯದೆ ಸ್ವತಃ ತಾವೇ ಟೇಪ್ ಕತ್ತರಿಸಿ ಮಹಾಮಂಟಪದ ಉದ್ಘಾಟನೆಯನ್ನು ಮಾಡಿ ವೇದಿಕೆಯ ಮೇಲೆ ಆಸೀನರಾಗಿ ಕಾರ್ಯಕ್ರಮಗಳನ್ನು ಆರಂಭಿಸಿಯೇಬಿಟ್ಟರು. ತಡವಾಗಿ ಬಂದ ಅರಸುರವರು ಮತ್ತು ಸಿದ್ಧವೀರಪ್ಪನವರು ಗುರುವರ್ಯರ ಮತ್ತು ಸಭಿಕರ ಕ್ಷಮಾಯಾಚನೆಯನ್ನು ಮಾಡಿ ತಮ್ಮ ಭಾಷಣವನ್ನು ಮಾಡಿದರು. ಇದೇ ತರಳಬಾಳು ಹುಣ್ಣಿಮೆ ಮಹೋತ್ಸವವು 1988 ರಲ್ಲಿ ನಮ್ಮ ಸಮ್ಮುಖದಲ್ಲಿ ಹುಬ್ಬಳ್ಳಿಯಲ್ಲಿ ನಡೆದಿತ್ತು. ಆಗಿನ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಸಕಾಲದಲ್ಲಿ ಬರಲಿಲ್ಲ. ಪದ್ಧತಿ ಪ್ರಕಾರ ಅವರಿಗಾಗಿ ಕಾಯದೆ ಅಂದಿನ ಸಭೆಯ ಕಾರ್ಯಕ್ರಮಗಳೆಲ್ಲವನ್ನೂ ಮುಗಿಸಿಕೊಂಡು ಸಭೆಯಿಂದ ನಾವು ನಿರ್ಗಮಿಸಿದ ಮೇಲೆ ಹೆಗಡೆಯವರು ಮತ್ತು ಬೊಮ್ಮಾಯಿಯವರು ಮಂಟಪಕ್ಕೆ ಆಗಮಿಸಿದರು. ಕ್ಷಮೆ ಯಾಚಿಸಿ ಭಾಷಣ ಮಾಡಲು ಸಭೆ ಆಗಲೇ ಮುಗಿದುಹೋಯಿತ್ತು! ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಅವರು ಖಿನ್ನರಾಗಿ ಹಿಂತಿರುಗಿದರು. ಪತ್ರಿಕೆಗಳು ಇದರ ಪರ/ವಿರೋಧವಾಗಿ ಎರಡೂ ರೀತಿಯಲ್ಲಿ ಬರೆದವು. ವಾಸ್ತವವಾಗಿ ಅವರಿಗೆ ಮುಖಭಂಗ ಮಾಡಬೇಕೆಂಬ ದುರುದ್ದೇಶ ನಮಗಿರಲಿಲ್ಲ. ಅವರಿಗಾಗಿ ಸಹಸ್ರಾರು ಭಕ್ತಾದಿಗಳನ್ನು ಕಾಯಿಸುವುದು ನಮಗೆ ಇಷ್ಟವಿರಲಿಲ್ಲ.

ಕೆಲವು ವರ್ಷಗಳ ಹಿಂದೆ (2001) ಬೆಂಗಳೂರಿನಲ್ಲಿ ಭಾರತೀಯ ಮನೋವೈದ್ಯರ ಸಂಸ್ಥೆಯು (Indian Psychiatric Society) ಅದರ ವಾರ್ಷಿಕ ಸಮ್ಮೇಳನಕ್ಕೆ ನಮ್ಮನ್ನು ಆಹ್ವಾನಿಸಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಪಾನನಿಷೇಧ ಚಳುವಳಿಯನ್ನು ಸಂಘಟಿಸಿ ನಾವು ಮಾಡಿದ ಹೋರಾಟಕ್ಕಾಗಿ ಮೆಚ್ಚಿ 'Spandana Award 2000' ಪ್ರಶಸ್ತಿಯನ್ನು ನೀಡಿ ನಮ್ಮನ್ನು ಗೌರವಿಸಿತು. ನಮ್ಮನ್ನು ಶಾಲು ಹೊದಿಸಿ ಸನ್ಮಾನಿಸಿದವರೆಂದರೆ ಕರ್ನಾಟಕದ ಉಚ್ಚ ನ್ಯಾಯಾಲಯದ ಅಂದಿನ ನ್ಯಾಯಮೂರ್ತಿಗಳಾದ ಜಸ್ಟೀಸ್ ಸಲ್ದಾನಾರವರು. ಅವರು ತಮ್ಮ ಭಾಷಣದಲ್ಲಿ ಒಂದು ರೋಚಕ ಪ್ರಸಂಗವನ್ನು ಪ್ರಸ್ತಾಪಿಸಿದರು. ಒಮ್ಮೆ ಅವರು ಮಂಗಳೂರಿಗೆ ಹೋಗಿದ್ದರಂತೆ. ಸಮಾರಂಭದ ಸಂಯೋಜಕರು ಶಾಲೆಯ ಪುಟ್ಟ ಬಾಲಕಿಯೊಬ್ಬಳಿಂದ ಅವರಿಗೆ ಹೂಗುಚ್ಛವನ್ನು ಕೊಡಿಸಿದರು. ನ್ಯಾಯಾಧೀಶರು ಬಗ್ಗಿ ಹಸನ್ಮುಖರಾಗಿ ಬಾಲಕಿಯ ಹೆಸರನ್ನು ಕೇಳಿದರು. ಬಾಲಕಿಯು ಮುಗ್ಧತೆಯಿಂದ ನ್ಯಾಯಾಧೀಶರನ್ನು ನೋಡಿ 'ಅಂಕಲ್ ನಾನೊಂದು ರಿಡಲ್ (ಒಗಟು) ಹೇಳುತ್ತೇನೆ, ಉತ್ತರ ಹೇಳುತ್ತೀರಾ?' ಎಂದು ಕೇಳಿದಳು. ಈ ಅನಿರೀಕ್ಷಿತ ಪ್ರಶ್ನೆಯಿಂದ ಸ್ವಲ್ಪ ವಿಚಲಿತರಾಗಿ ಕಂಡುಬಂದ ನ್ಯಾ॥ ಸಲ್ದಾನಾರವರು 'ಹೇಳು ಮಗು, ನನಗೆ ಗೊತ್ತಿದ್ದರೆ ಹೇಳುತ್ತೇನೆ, ಇಲ್ಲದಿದ್ದರೆ ನೀನೇ ಹೇಳುವೆಯಂತೆ' ಎಂದರು. ಮಗು ಉತ್ಸಾಹದಿಂದ ಒಗಟನ್ನು ಹೇಳಲು ಆರಂಭಿಸಿತು:

ಒಮ್ಮೆ ಮೂವರು ಕುಪ್ರಸಿದ್ಧ ಭ್ರಷ್ಟ ರಾಜಕಾರಣಿಗಳು ಒಂದು ದೋಣಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ನದಿ ತುಂಬಿ ಹರಿಯುತ್ತಿತ್ತು. ದೋಣಿಯು ನದಿಯ ಮಧ್ಯಭಾಗಕ್ಕೆ ಹೋದಾಗ ಇದ್ದಕ್ಕಿದ್ದಂತೆಯೇ ಪ್ರವಾಹದಲ್ಲಿ ಏರುಪೇರಾಗಿ ಮುಳುಗಿತು. ಅದರಲ್ಲಿ ಪ್ರಯಾಣಿಸುತ್ತಿದ್ದ ಮೂವರೂ ಭ್ರಷ್ಟ ರಾಜಕಾರಣಿಗಳು ನೀರಿನಲ್ಲಿ ಮುಳುಗಿದರು. ಸ್ವಲ್ಪ ಹೊತ್ತಿನ ಮೇಲೆ ಈ ದುರ್ಘಟನೆಯಲ್ಲಿ ಒಬ್ಬರು ಮಾತ್ರ ಬದುಕಿ ಉಳಿದರು. ಅವರು ಯಾರು? ನ್ಯಾಯಾಧೀಶರು ಗಲಿಬಿಲಿಗೊಂಡರು. ಆ ಮೂವರಲ್ಲಿ ಯಾರು ಅತಿ ಹೆಚ್ಚು ಭ್ರಷ್ಟರು ಎಂದು ಮನಸ್ಸಿನಲ್ಲಿಯೇ ನ್ಯಾಯದ ತಕ್ಕಡಿಯನ್ನು ಹಿಡಿದು ತೂಗ ತೊಡಗಿದರು. ಮಗು ಕಾತುರತೆಯಿಂದ ಉತ್ತರಕ್ಕಾಗಿ ಕಾಯುತ್ತಿತ್ತು. ಕ್ಷಣಕಾಲ ಯೋಚಿಸಿದ ನಂತರ ನ್ಯಾಯಾಧೀಶರಿಗೆ ಇದರಲ್ಲೇನೋ ಟ್ರಿಕ್ ಇದೆ ಎನ್ನಿಸಿತು. ಇಂತಹ ಸಂದರ್ಭಗಳಲ್ಲಿ ಉತ್ತರ ಹೇಳಿದರೆ ಮಕ್ಕಳಿಗೆ ಸಂತೋಷವಾಗುವುದಿಲ್ಲ; 'ನಾನು ಸೋತೆ, ನೀನೇ ಹೇಳು ಮಗು' ಎಂದರೇನೇ ಮಕ್ಕಳಿಗೆ ಖುಷಿ ಎಂಬ ಅರಿವೂ ಅವರಿಗೆ ಇತ್ತು. ಅವರನ್ನು ಸೋಲಿಸಿದ್ದಕ್ಕಾಗಿ ಸಂತೋಷಪಟ್ಟ ಆ ಮಗು ಹೇಳಿತು: "ಆ ಮೂವರೂ ಮುಳುಗಿದ್ದರಿಂದ ದೇಶ ಉಳಿಯಿತು!"

ಜಾಗೃತ ಮತದಾರರೇ! ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂಬ ಮಾತು ನಿಜ. ಆದರೆ ನೀವು ಪ್ರಭುಗಳಾಗಿ ರಾಜಕಾರಣಿಗಳ ಕಣ್ಣಿಗೆ ಕಾಣಿಸುವುದು ಚುನಾವಣೆಗಳಲ್ಲಿ ಮಾತ್ರ ಎಂಬುದು ನೆನಪಿರಲಿ. ಈ ದೇಶ ಉಳಿಯಬೇಕೆಂದರೆ ನಿಮ್ಮ ಮತದಾನ ಪವಿತ್ರವಾದ ದಾನವಾಗಿರಲಿ; ಬಿಕರಿಯಾಗದಿರಲಿ!

22.4.2008

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑